# ಕುಂಜುಪಿಳ್ಳೈ ತಂಬುರಾಟ್ಟಿ ಮತ್ತು ಕೊಚ್ಚಿಕಾವು ತಂಬುರಾಟ್ಟಿ

## ಫಲಕಾರಿಯಾದ ಉಪದೇಶ

**ಸ್ವಾ**ಮಿ ವಿವೇಕಾನಂದರ ಜೀವಿತ ಕಾಲದಲ್ಲಿ ತಿರುವಾಂಕೂರು, ಕೊಚ್ಚಿ ಹಾಗೂ ಮಲಬಾರ್ ಪ್ರದೇಶಗಳು ಕೂಡಿ ಮಲಬಾರ್ ಪ್ರಾಂತ್ಯವೆಂದು ಹೆಸರಾಗಿತ್ತು. ಒಮ್ಮೆ ಸ್ವಾಮೀಜಿ ಆ ಪ್ರಾಂತ್ಯಕ್ಕೆ



ಭೇಟಿಯಿತ್ತಾಗ ಕೊಡುಂಗಲ್ಲೂರಿನ ಸುಪ್ರಸಿದ್ಧ ಭಗವತಿ ಮಂದಿರದ ದೇವಿಯ ದರ್ಶನಕ್ಕಾಗಿ ಹೋದರು. ಆದರೆ ಸ್ವಾಮೀಜಿಯವರನ್ನು ಒಳಗೆ ಬಿಡಲಿಲ್ಲ. ದೇವಸ್ಥಾನದ ಪುರೋಹಿತರು ಸ್ವಾಮೀಜಿಯವರ ಜಾತಿ ತಿಳಿಯಬಯಸಿದಾಗ, ಅವರು, ಅದು ಸಂನ್ಯಾಸಧರ್ಮಕ್ಕೆ ವಿರುದ್ಧವೆಂದು ಉತ್ತರ ಹೇಳಲು ನಿರಾಕರಿಸಿದರು. ಈ ಕಾರಣದಿಂದ ಮಂದಿರದೊಳಗೆ ಹೋಗಲು ಅನುಮತಿ ದೊರೆಯಲಿಲ್ಲ. ನಂತರ ಅವರ ಭವ್ಯ ನಿಲುವು, ವ್ಯಕ್ತಿತ್ವಗಳಿಂದ ಪ್ರಭಾವಿತರಾದ ಪುರೋಹಿತರು ಅವರನ್ನು ತಾಯಿ ಭಗವತಿಯ ದರ್ಶನಕ್ಕೆ ಆಹ್ವಾನಿಸಿದರು. ಸಾರ್ವಜನಿಕರಿಗೆ ಮುಕ್ತವಾಗಿ ದೇವಿಯ ದರ್ಶನ ದೊರೆಯದ ಕಾರಣ, ಸ್ವಾಮೀಜಿ ಒಳಗೆ ಹೋಗಲು ನಿರಾಕರಿಸಿದರು. ಅವರು ದೇವಸ್ಥಾನದ ಆವರಣದಲ್ಲಿ ಮೂರು ದಿನಗಳ ಕಾಲ ಒಂದು ಮರದಡಿಯಲ್ಲಿ ಕುಳಿತು ಧ್ಯಾನ ಹಾಗೂ ಆಧ್ಯಾತ್ಮಿಕ ತತ್ತ್ವಗಳ ಚರ್ಚೆಯಲ್ಲಿ ಕಳೆದರು.

ಅಂದಿನ ಕಾಲದಲ್ಲಿ ಕೊಡುಂಗಲ್ಲೂರು ಕೋವಿಲಕಂ (ಕೊಡುಂಗಲ್ಲೂರಿನ ಅರಮನೆ) ಸಂಸ್ಕೃತ, ತತ್ತ್ವಜ್ಞಾನ, ವೇದಾಂತ, ಇತ್ಯಾದಿ ವಿದ್ಯೆಗಳನ್ನು ಕಲಿಯುವ ಗುರುಕುಲವೆಂದು ಸುಪ್ರಸಿದ್ಧವಾಗಿತ್ತು. ಇಲ್ಲಿ ಸ್ತ್ರೀಪುರುಷರಿಬ್ಬರಿಗೂ ಸಮಾನ ಅವಕಾಶವಿತ್ತು. ಮೂರನೇ ದಿನ ಸ್ವಾಮೀಜಿ ಈ ಗುರುಕುಲವನ್ನು ವೀಕ್ಷಿಸಲು ಹೋದರು. ಕುಂಜುಪಿಳ್ಳೈ ತಂಬುರಾಟ್ಟಿಯ ಕಿರಿಮಗ ಕುಂಜುಕುಟ್ಟನ್ ಸ್ವಾಮೀಜಿಗೆ ಕುಳಿತುಕೊಳ್ಳಲು ಆಸನವಿತ್ತನು. ಅಲ್ಲಿನ ಪಂಡಿತರು ಸ್ವಾಮಿಜಿಯವರೊಡನೆ ಶಾಸ್ತ್ರಗಳ ಚರ್ಚೆ ನಡೆಸಿದರು. ಅಷ್ಟು ಹೊತ್ತಿಗಾಗಲೇ ಅರಮನೆಯಲ್ಲೆಲ್ಲಾ ಈ ಆಗಂತುಕ ಸಂನ್ಯಾಸಿಯ ಬರುವಿಕೆಯ ಬಗ್ಗೆ ಸುದ್ದಿ ಹರಡಿತ್ತು. ಇಬ್ಬರು ವೃದ್ಧ ಸ್ತ್ರೀಯರು ಕುಂಜುಪಿಳ್ಳೈ ತಂಬುರಾಟ್ಟಿ ಹಾಗೂ ಕೊಚ್ಚಿಕಾವು ತಂಬುರಾಟ್ಟಿ ಸ್ವಾಮೀಜಿಯವರ ದರ್ಶನಕ್ಕಾಗಿ ಓಡಿಬಂದರು. ಆ ವೃದ್ಧೆಯ ಒತ್ತಾಯದ ಮೇರೆಗೆ ಸ್ವಾಮೀಜಿ ಆಕೆ ತಂದ ಎಳನೀರನ್ನು ಕುಡಿದರು. ಸ್ವಾಮೀಜಿಯವರನ್ನು ಅವರು ಸಂಸ್ಕೃತ ಭಾಷೆಯಲ್ಲಿ ಸ್ವಾಗತಿಸಿದರು. ಸ್ವಾಮೀಜಿ ಸಹ ಸಂಸ್ಕೃತದಲ್ಲೇ ಅವರೆಲ್ಲರನ್ನೂ ಉದ್ದೇಶಿಸಿ ಮಾತನಾಡಿದರು. ಉಪನಿಷತ್ತನ್ನು ಕಲಿತಿದ್ದರೆ ಅವುಗಳಿಂದ ಕೆಲವು ಮಂತ್ರಗಳನ್ನು ಪಠಿಸಲು ಹೇಳಿ, ಸಾಮಾನ್ಯ ಜನರಿಗಾಗಿ ವೇದಾಂತವನ್ನು ತಮ್ಮ ಮಾತೃಭಾಷೆಯಾದ ಮಲಯಾಳಂಗೆ ತರ್ಜುಮೆ ಮಾಡಲು ಸಲಹೆಯಿತ್ತರು. ಆ ವೃದ್ಧೆಯರಿಬ್ಬರೂ ಇಂಗ್ಲೀಷ್ ಹಾಗೂ ಮಲೆಯಾಳಂ ಭಾಷೆಗಳಲ್ಲಿನ ತಮ್ಮ ಅಜ್ಞಾನವನ್ನು ಬಿನ್ನವಿಸಿಕೊಂಡರು. ಸ್ವಾಮೀಜಿ ಅವರ ವಯಸ್ಸನ್ನು ಲೆಕ್ಕಿಸದೆ, ಎರಡೂ ಭಾಷೆಗಳನ್ನು ಕಲಿತು ಅವುಗಳಲ್ಲಿ



ಪರಿಣತಿ ಪಡೆದು ಭಾಷಾಂತರಗೊಳಿಸಬೇಕೆಂದು ಹೇಳಿದರು. ಅನಂತರ ಆಧ್ಯಾತ್ಮಿಕ ಉಪದೇಶಕ್ಕಾಗಿ ಅವರ ಬಿನ್ನಹ ವನ್ನು ಮನ್ನಿಸಿ, ಗಹನ ವಿಚಾರಗಳ ಮೇಲೆ ಬೆಳಕು ಚೆಲ್ಲಿ ದರು. ಕೊನೆಯಲ್ಲಿ ಶಾಸ್ತ್ರಗಳು ಮನುಜರಿಗೆ ದಾರಿ ತೋರುತ್ತವೆ, ಆದರೆ ಅವನ್ನು ಜೀವನದಲ್ಲಿ ಅನುಷ್ಠಾನಕ್ಕೆ ತರದಿದ್ದರೆ ಆ ಅರಿವು ವ್ಯರ್ಥ ಎನ್ನುತ್ತಾ ಅವರನ್ನು ಮನಃಪೂರ್ವಕ ವಾಗಿ ಆಶೀರ್ವದಿಸಿ ಬೀಳ್ಕೊಂಡರು.

ಸ್ವಾಮೀಜಿಯವರ ಆಶೀರ್ವಾದ, ಪ್ರಭಾವ ವ್ಯರ್ಥವಾಗಲಿಲ್ಲ. ಕುಂಜುಪಿಳ್ಳೆಯ ಆಸಕ್ತಿಯಿಂದಾಗಿ ಗುರುಕುಲದಲ್ಲಿ ಹೆಣ್ಣು ಮಕ್ಕಳಿಗೆ ಇಂಗ್ಲಿಷ್ ಶಿಕ್ಷಣ ಪ್ರಾರಂಭವಾಯಿತು. ಹಾಗೂ ಆ ವೃದ್ಧೆ ತಾನು ಕಲಿತು, ನಂತರ ಅವರಿಗೆಲ್ಲಾ ಪ್ರಥಮ ಗುರುವಾದಳು! ತನ್ನ ಮಗನಾದ ಕುಂಜುಕುಟ್ಟನ್‌ಗೆ ಮಾತೃಭಾಷೆಯಾದ ಮಲೆಯಾಳಂ ಕಲಿತು ಪದ್ಯಗಳನ್ನು ರಚಿಸಲು ಪ್ರೋತ್ಸಾಹಿಸಿದಳು. ಮುಂದೆ ಆತ ಕೇರಳದ ವೇದವ್ಯಾಸ ಎಂದು ಪ್ರಖ್ಯಾತನಾದನು. ಅನೇಕ ಸ್ಥಳಗಳಿಂದ ಪಂಡಿತರು ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಕೊಚ್ಚಿಕಾವಿಗೆ ಬರುತ್ತಿದ್ದರು. ಕುಂಜುಪಿಳ್ಳೆಯ ಆಸಕ್ತಿ ಇಷ್ಟಕ್ಕೆ ನಿಲ್ಲದೆ, ಆಕೆ ಆ ಪ್ರದೇಶದ ಹೆಣ್ಣುಮಕ್ಕಳಿಗೆಲ್ಲಾ ಇಂಗ್ಲಿಷ್ ಕಲಿಯಲು ಪ್ರೋತ್ಸಾಹಿಸತೊಡಗಿದಳು. ಸ್ತ್ರೀ ಶಿಕ್ಷಣದಲ್ಲಿ ಆಕೆಯ ಪಾತ್ರ ಹಿರಿದು. ಆ ಪ್ರದೇಶದಲ್ಲಿ ಕಥಕ್ಕಳಿ ನೃತ್ಯವು ಆಕೆಯಿಂದಾಗಿಯೇ ಪ್ರಚಲಿತವಾಯಿತು.

''ಮಹಿಳೆಯರ ಸ್ಥಿತಿ ಉತ್ತಮಗೊಂಡಲ್ಲದೆ ಜಗತ್ತು ಮೇಲಾಗುವುದಕ್ಕೆ ಅವಕಾಶವಿಲ್ಲ. ಹಕ್ಕಿ ಒಂದೇ ರೆಕ್ಕೆಯ ಬಲದಿಂದ ಹಾರಲಾರದು.''

— *ಸ್ವಾಮಿ ವಿವೇಕಾನಂದ*

ಶ್ರೀ ಭಗವತೀ ಕ್ಷೇತ್ರ , ಕೊಡುಂಗಲ್ಲೂರು

